ಜೊಲ್ಲೆ ಗ್ರುಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)
ಜುಲೈ 2024–ಸಂಪುಟ–8 ಸಂಚಿಕೆ–7

# ದರ್ಪಣ






## ಅಂತರಾಷ್ಟ್ರೀಯ ಯೋಗಾ ದಿನ

ಜೊಲ್ಲೆ ಗ್ರುಪ್ ಮತ್ತು ತಾಲೂಕು ಆಡಳಿತದ ವತಿಯಿಂದ ನಗರದ ಶ್ರೀಪೇವಾಡಿ ರಸ್ತೆಯಲ್ಲಿರುವ ಜೊಲ್ಲೆ ವಿದ್ಯಾಸಂಸ್ಥೆಯ ಮೈದಾನದಲ್ಲಿ ನಡೆದ 10ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಜನಪ್ರೀಯ ಶಾಸಕರಾದ ಸೌ ಶಶಿಕಲಾ ಜೊಲ್ಲೆ ಯವರು ಮಾತನಾಡಿ "ಪ್ರತಿಯೊಬ್ಬರೂ ಕೂಡ ತಮ್ಮ ಜೀವನದಲ್ಲಿ ಯೋಗವನ್ನು ಅವಿಭಾಜ್ಯ ಅಂಗವನ್ನಾಗಿ ತೆಗೆದುಕೊಳ್ಳಬೇಕು. ಸ್ಪರ್ಧಾತ್ಮಕ ಯಗದಲ್ಲಿ ಪ್ರತಿಯೊಬ್ಬರೂ ಅದಕ್ಕೆ ಅನುಗುಣವಾಗಿ ಯಾಂತ್ರಿಕ ಜೀವನ ನಡೆಸಬೇಕಾಗಿದೆ. ಗುರಿಗಳನ್ನು ಸಾಧಿಸಲು ಪ್ರಯತ್ನಿಸುತ್ತಿರುವ ಪ್ರತಿಯೊಬ್ಬರೂ ವ್ಯಾಯಾಮದ ಕೊರತೆ ಮತ್ತು ಹೆಚ್ಚುತ್ತಿರುವ ಒತ್ತಡದಿಂದಾಗಿ ಆರೋಗ್ಯದ ದೂರುಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಮಾನವ ಜೀವನವು ವಿವಿಧ ರೋಗಗಳಿಂದ ಬಳಲುತ್ತಿದೆ ಮತ್ತು ಸಮಾಜವು ಸಹ ಈ ಪರಿಸ್ಥಿತಿಯಲ್ಲಿ ಮಾನವನ ಆರೋಗ್ಯ ಅಭಿವೃದ್ಧಿ ಮತ್ತು ಸಧೃಡವಾಗಿರಲು ಭಾರತವು ಇಡೀ ಜಗತ್ತಿಗೆ ಯೋಗ ಮತ್ತು ಪ್ರಾಣಾಯಾಮವನ್ನು ಕಾಣಿಕೆಯಾಗಿ ನೀಡಿದೆ. ಅದನ್ನು ಅಳವಡಿಸಿಕೊಳ್ಳುವುದು ಅವಶ್ಯಕವಾಗಿದೆ. ಹೊರದೇಶಗಳು ಇದರ ಮಹತ್ವ ಅರಿತು ಅದರ ಅನುಕರಣೆ ಮಾಡುತ್ತಿದ್ದಾರೆ" ಎಂದರು.

ಪತಂಜಲಿ ಯೋಗ ಸಮಿತಿಯ ರಾಮದೇವ ಬಾಬಾ ಅವರು ದೇಶದಲ್ಲಿ ಯೋಗ ಮತ್ತು ಪ್ರಾಣಾಯಾಮವನ್ನು ಪ್ರತಿದಿನ ಪ್ರಚಾರ ಮಾಡಿ ಅದರ ಮಹತ್ವವನ್ನು ತಿಳಿಸಿಕೊಟ್ಟರು.

ಭಾರತದ ಕೊಡುಗೆಯಾದ ಯೋಗ ಮತ್ತು ಪ್ರಾಣಾಯಾಮವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ತರಲು ಪ್ರಧಾನಿ ನರೇಂದ್ರ ಮೋದಿ ಅವರು ಆರೋಗ್ಯಕ್ಕೆ ಹೇಗೆ ಉಪಯುಕ್ತ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದು, ನೂರಾರು ದೇಶಗಳಲ್ಲಿ ವಿಶ್ವ ಯೋಗ ದಿನವನ್ನು ಆಚರಿಸಲಾಗುತ್ತಿದೆ. ಯೋಗವನ್ನು ದೈನಂದಿನ ಜೀವನದಲ್ಲಿ ಅಳವಡಿಕೊಳ್ಳುವದರಿಂದ ದೊಡ್ಡ ದೊಡ್ಡ ಆರೋಗ್ಯ ಸಮಸ್ಯೆ ಹೃದ್ರೋಗ, ರಕ್ತದೊತ್ತಡ, ಮಧುಮೇಹ ಮತ್ತು ಇತರ ಕಾಯಿಲೆಗಳನ್ನು ತಪ್ಪಿಸಬಹುದು ಎಂದು ಅಭಿಪ್ರಾಯ ವ್ಯಕ್ತವಡಿಸಿದರು.

ವೇದಿಕೆಯ ಮೇಲೆ ಮಾಜಿ ಸಂಸದರಾದ ಅಣ್ಣಾಸಾಹೇಬ ಜೊಲ್ಲೆ, ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆಯ ಸಂಚಾಲಕ ಜಯವಂತ ಭಾಟಲೆ, ತಹಶೀಲ್ದಾರ್ ಮುಜಫರ ಬಳಿಗಾರ, ಸಿಪಿಐ ಬಿ ಎಸ್ ತಳವಾರ, ಪಾಲಿಕೆ ಆಯುಕ್ತರಾದ ಜಗದೀಶ್ ಹುಲಗೇಜ್ಜಿ, ಹಸ್ಕಾಂ ಅಭಿಯಂತರ ಅಕ್ಷಯ ಚೌಗಲೆ, ಯೋಗ ಶಿಕ್ಷಕ ದಶರಥ ಕುಂಬಾರ, ಜೆ. ಡಿ. ಶಂಧೆ, ಶಂಕರ ಹಿರೇಮಠ ಆಶಾ ತಿಳವೆ ಉಪಸ್ಥಿತರಿದ್ದರು.

ಸುಮಾರು ಎರಡು ಘಂಟೆಗಳ ಕಾಲ ನಡೆದ ಯೋಗ ಪ್ರಾತ್ಯಕ್ಷಿಕೆ ವೇಳೆ ಹಲವಾರು ಶಾಲಾ ಮಕ್ಕಳು, ಮಹಿಳೆಯರು, ಪುರುಷರು, ಹಾಗೂ ರಾಜು ಗುಂಡೇಶ, ಸುನೀಲ್ ಪಾಟೀಲ್, ಯೋಗಿತಾ ಘೋರ್ಪಡೆ, ಕಾವೇರಿ ಮಿರ್ಜಿ, ಬಂಡಾ ಘೋರ್ಪಡೆ, ರವಿ ಕದಮ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.





# ವಿಶ್ವ ಪರಿಸರ ದಿನ 2024

ವಿಶ್ವ ಪರಿಸರ ದಿನವನ್ನು ವಾರ್ಷಿಕವಾಗಿ ಜೂನ್ 5 ರಂದು ಆಚರಿಸಲಾಗುತ್ತದೆ, ಇದು ಪರಿಸರದ ಕಾಳಜಿಯ ನಮ್ಮ ಸಾಮೂಹಿಕ ಕರ್ತವ್ಯದ ಪ್ರಬಲ ಜ್ಞಾಪನೆಯಾಗಿದೆ. ನಮ್ಮ ದೈನಂದಿನ ಜೀವನದಲ್ಲಿ ಸುಸ್ಥಿರ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದರ ಮೂಲಕ, ಸಂಪನ್ಮೂಲಗಳನ್ನು ಸಂರಕ್ಷಿಸುವ ಮೂಲಕ ಮತ್ತು ಪರಿಸರ ಸ್ನೇಹಿ ಪರಿಹಾರಗಳಿಗಾಗಿ ಪ್ರತಿಪಾದಿಸುವ ಮೂಲಕ ನಾವೆಲ್ಲರೂ ಸಕಾರಾತ್ಮಕ ಪರಿಣಾಮವನ್ನು ಬೀರಬಹುದು. ನೆನಪಿಡಿ, ಮರಗಳನ್ನು ನೆಡುವುದು, ತ್ಯಾಜ್ಯವನ್ನು ಕಡಿಮೆ ಮಾಡುವುದು ಅಥವಾ ನವೀಕರಿಸಬಹುದಾದ ಶಕ್ತಿಯನ್ನು ಬೆಂಬಲಿಸುವಂತಹ ಸಣ್ಣ ಹಂತಗಳು ಸಹ ಗಮನಾರ್ಹ ಬದಲಾವಣೆಗೆ ಕೊಡುಗೆ ನೀಡುತ್ತವೆ. ನಮ್ಮ ಗ್ರಹಕ್ಕೆ ಅಭಿವೃದ್ಧಿ ಹೊಂದುತ್ತಿರುವ ಭವಿಷ್ಯವನ್ನು ಖಚಿತಪಡಿಸಿಕೊಳ್ಳಲು ಒಟ್ಟಿಗೆ ಕೆಲಸ ಮಾಡೋಣ! ವಿಶ್ವಸಂಸ್ಥೆಯು ನಮ್ಮ ಪರಿಸರವನ್ನು ರಕ್ಷಿಸಲು ವಿಶ್ವಾದ್ಯಂತ ಜಾಗೃತಿ ಮತ್ತು ಕ್ರಮವನ್ನು ಉತ್ತೇಜಿಸುವ ಅವಶ್ಯಕತೆಯಿದೆ ಎಂಬ ಅಂಶವನ್ನು ಒತ್ತಿಹೇಳಲು ಈ ಸಂದರ್ಭವನ್ನು ಬಳಸಿಕೊಳ್ಳುತ್ತದೆ.

### ವಿಶ್ವ ಪರಿಸರ ದಿನದ ಥೀಮ್ 2024

ವಿಶ್ವ ಪರಿಸರ ದಿನವು ಪರಿಸರ ಸವಾಲುಗಳನ್ನು ಎತ್ತಿ ಹಿಡಿಯುತ್ತದೆ. ಪ್ರತಿ ವರ್ಷ ಹವಾಮಾನ ಬದಲಾವಣೆ, ಜಾಗತಿಕ ತಾಪಮಾನ ಮತ್ತು ಅರಣ್ಯನಾಶದಂತಹ ಸಮಸ್ಯೆಗಳನ್ನು ನಿಭಾಯಿಸುವ ಒಂದು ವಿಭಿನ್ನ ಥೀಮ್ ಅನ್ನು ಆಯ್ಕೆ ಮಾಡಲಾಗುತ್ತದೆ. ಈ ವರ್ಷ, ವಿಶ್ವ ಪರಿಸರ ದಿನದ ಥೀಮ್–ಭೂಮಿ ಪುನಃಸ್ಥಾಪನೆ, ಮರುಭೂಮೀಕರಣ ಮತ್ತು ಬರ ಸ್ಥಿತಿಸ್ಥಾಪಕತ್ವ. "ಮರುಭೂಮಿಯ ವಿರುದ್ಧ ಹೋರಾಡಲು ಯುಎನ್ ಕನ್ವೆನ್ಷನ್ ಪ್ರಕಾರ, ಗ್ರಹದ ಭೂಮಿಯ ಶೇಕಡಾ 40 ರಷ್ಟು ಕ್ಷೀಣಿಸುತ್ತಿದೆ, ಇದು ಪ್ರಪಂಚದ ಅರ್ಧದಷ್ಟು ಜನಸಂಖ್ಯೆಯ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಬರಗಾಲಗಳ ಸಂಖ್ಯೆ ಮತ್ತು ಅವಧಿಯು 2000 ರಿಂದ 29 ಪ್ರತಿಶತದಷ್ಟು ಹೆಚ್ಚಾಗಿದೆ ತುರ್ತು ಕ್ರಮವಿಲ್ಲದೆ, ಬರಗಾಲಗಳು 2050 ರ ವೇಳೆಗೆ ವಿಶ್ವದ ಜನಸಂಖ್ಯೆಯ ಮುಕ್ಕಾಲು ಭಾಗದಷ್ಟು ಜನರ ಮೇಲೆ ಪರಿಣಾಮ ಬೀರಬಹುದು" ಎಂದು ವಿಶ್ವಸಂಸ್ಥೆಯ ಅಧಿಕೃತ ವೆಬ್‌ಸೈಟ್ ಬರೆದಿದೆ.

2023 ರಲ್ಲಿ ವಿಶ್ವ ಪರಿಸರ ದಿನವು ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರಗಳ ಮೇಲೆ ಕೇಂದ್ರೀಕರಿಸಿದೆ. 2022 ರಲ್ಲಿ, ಥೀಮ್ 'ಒಂದೇ ಭೂಮಿ' ಇದೆ ಮತ್ತು ಜನರು ಮತ್ತು ಪ್ರಕೃತಿಯನ್ನು ಸಮತೋಲನಕ್ಕೆ ತರುವ ಅಗತ್ಯವನ್ನು ಒತ್ತಿಹೇಳಿತು. 2021 ರ ಥೀಮ್ ನಮ್ಮ ಹಾನಿಗೊಳಗಾದ ಪರಿಸರ ವ್ಯವಸ್ಥೆಗಳನ್ನು ಪುನರುಜ್ಜೀವನಗೊಳಿಸಲು ಜಾಗತಿಕ ತುರ್ತು ಕ್ರಮಕ್ಕೆ ಕರೆ ನೀಡಿದೆ.

### ವಿಶ್ವ ಪರಿಸರ ದಿನದ ಇತಿಹಾಸ 2024

ವಿಶ್ವ ಪರಿಸರ ದಿನದ ಬೀಜವನ್ನು 1972 ರಲ್ಲಿ ಬಿತ್ತಲಾಯಿತು. ಜೂನ್ 5 ರಂದು ಸ್ವೀಡನ್‌ನ ಸ್ಟಾಕ್‌ಹೋಮ್‌ನಲ್ಲಿ ನಡೆದ ಮಾನವ ಪರಿಸರದ ಮೇಲಿನ ವಿಶ್ವಸಂಸ್ಥೆಯ ಸಮ್ಮೇಳನವು ಪರಿಸರ ಸಂರಕ್ಷಣೆಯ ಕುರಿತು ವಿಮರ್ಶಾತ್ಮಕ ಚರ್ಚೆಗಳನ್ನು ಹುಟ್ಟುಹಾಕಿತು. ಈ ಪ್ರಮುಖ ಕ್ಷಣವನ್ನು ಗೌರವಿಸಲು, ಮೊದಲ ಅಧಿಕೃತ ವಿಶ್ವ ಪರಿಸರ ದಿನವನ್ನು ಒಂದು ವರ್ಷದ ನಂತರ 1973 ರಲ್ಲಿ ಆಚರಿಸಲಾಯಿತು, ಮತ್ತು ಸಂಪ್ರದಾಯವು ಅಂದಿನಿಂದಲೂ ಅದೇ ದಿನಾಂಕದಂದು ಮುಂದುವರೆದಿದೆ.

### 2024 ರ ವಿಶ್ವ ಪರಿಸರ ದಿನದ ಮಹತ್ವ

ವಿಶ್ವ ಪರಿಸರ ದಿನವು ಜಾಗೃತಿ ಮೂಡಿಸುತ್ತದೆ, ಕ್ರಿಯೆಯನ್ನು ಸಜ್ಜುಗೊಳಿಸುತ್ತದೆ ಮತ್ತು ಪರಿಸರ ಸುಸ್ಥಿರತೆಯನ್ನು ಉತ್ತೇಜಿಸುತ್ತದೆ. ಅಭಿಯಾನಗಳು, ಘಟನೆಗಳು ಮತ್ತು ಉಪಕ್ರಮಗಳ ಮೂಲಕ, ವಿಶ್ವ ಪರಿಸರ ದಿನವು ವ್ಯಕ್ತಿಗಳು ಮತ್ತು ಸಮುದಾಯಗಳನ್ನು ಬದಲಾವಣೆಗಳನ್ನು ಮಾಡಲು ಪ್ರೇರೇಪಿಸುತ್ತದೆ, ತುರ್ತು ಪ್ರಜ್ಞೆಯನ್ನು ಬೆಳೆಸುತ್ತದೆ ಮತ್ತು ಸುಸ್ಥಿರ ಭವಿಷ್ಯಕ್ಕಾಗಿ ಪರಿಸರ ಸವಾಲುಗಳನ್ನು ಪರಿಹರಿಸುತ್ತದೆ.

# ವಿಶ್ವ ರಕ್ತದಾನಿಗಳ ದಿನ 2024

ರಕ್ತದಾನವು ಒಂದು ಉದಾತ್ತ ಕಾರ್ಯವಾಗಿದೆ, ಮತ್ತು ಪ್ರಪಂಚದಾದ್ಯಂತ ಲಕ್ಷಾಂತರ ನಿರ್ಗತಿಕ ರೋಗಿಗಳು ಪ್ರತಿ ತಿಂಗಳು ಇಂತಹ ದಾನಗಳಿಂದ ಪ್ರಯೋಜನ ಪಡೆಯುತ್ತಾರೆ, ರಕ್ತದ ನಷ್ಟ, ರಕ್ತಹೀನತೆ ಮತ್ತು ಕ್ಯಾನ್ಸರ್‌ನಂತಹ ವಿವಿಧ ವೈದ್ಯಕೀಯ ಪರಿಸ್ಥಿತಿಗಳಿಗೆ ಚಿಕಿತ್ಸೆ ಪಡೆಯುತ್ತಾರೆ.

ಜನರು ರಕ್ತನಿಧಿಗಳಿಗೆ ಅಥವಾ ಸಂಸ್ಥೆಗಳಿಗೆ ರಕ್ತವನ್ನು ದಾನ ಮಾಡುತ್ತಾರೆ, ಅದು ರಕ್ತ ವರ್ಗಾವಣೆಗಾಗಿ ಅದನ್ನು ಸಂಗ್ರಹಿಸುತ್ತದೆ, ಇದು ಆರೋಗ್ಯ ರಕ್ಷಣೆ ಉದ್ಯಮಕ್ಕೆ ನಿರ್ಣಾಯಕವಾದ ಆರೋಗ್ಯಕರ ರಕ್ತದ ಸ್ಥಿರ ಪೂರೈಕೆಯನ್ನು ಖಚಿತಪಡಿಸುತ್ತದೆ. ಪ್ರತಿ ವರ್ಷ, ಜೂನ್ 14 ರಂದು ವಿಶ್ವ ರಕ್ತದಾನಿಗಳ ದಿನವನ್ನು ಆಚರಿಸಲಾಗುತ್ತದೆ ಮತ್ತು ರಕ್ತದಾನದ ಮಹತ್ವವನ್ನು ಎತ್ತಿ ತೋರಿಸುತ್ತದೆ ಮತ್ತು ಹೆಚ್ಚಿನ ಜನರನ್ನು ದಾನಿಗಳಾಗಲು ಪ್ರೋತ್ಸಾಹಿಸುತ್ತದೆ. ಜಗತ್ತು ಇಂದು ಜೂನ್ 14 ರಂದು ವಿಶ್ವ ರಕ್ತದಾನಿಗಳ ದಿನ 2024 ಅನ್ನು ಆಚರಿಸುತ್ತಿರುವಾಗ, ಅದರ ಬಗ್ಗೆ ನಿಮಗೆ ತಿಳಿದಿರುವ ಕೆಲವು ವಿಷಯಗಳು ಇಲ್ಲಿವೆ.

### ವಿಶ್ವ ರಕ್ತದಾನಿಗಳ ದಿನ 2024: ಇತಿಹಾಸ

ರಿಚರ್ಡ್ ಲೋವರ್ ಎಂಬ ವಿಜ್ಞಾನಿಯು 1940 ರಲ್ಲಿ ಎರಡು ನಾಯಿಗಳ ನಡುವೆ ಯಾವುದೇ ದುಷ್ಪರಿಣಾಮಗಳಿಲ್ಲದೆ ರಕ್ತ ವರ್ಗಾವಣೆಯನ್ನು ಮಾಡಿದರು. ಅದು ಆರೋಗ್ಯ ಕ್ಷೇತ್ರದಲ್ಲಿನ ಪ್ರಗತಿಯ ಕ್ಷಣವಾಗಿದ್ದು ರಕ್ತ ವರ್ಗಾವಣೆಯ ತಂತ್ರಗಳನ್ನು ಅಭಿವೃದ್ಧಿಪಡಿಸಲು ಅವಕಾಶ ಮಾಡಿಕೊಟ್ಟಿತು ಮತ್ತು ರಕ್ತದಾನ ಮತ್ತು ರಕ್ತ ವರ್ಗಾವಣೆಯನ್ನು ನಿಯಮಿತ ವಿಧಾನವನ್ನಾಗಿ ಮಾಡಿತು. 2005 ರಲ್ಲಿ, ವಿಶ್ವ ಆರೋಗ್ಯ ಅಸೆಂಬ್ಲಿ ಪ್ರತಿ ವರ್ಷ ಜೂನ್ 24 ರಂದು ವಿಶ್ವ ರಕ್ತದಾನಿಗಳ ದಿನವನ್ನು ಆಚರಿಸಲು ಘೋಷಿಸಿತು ಮತ್ತು ಅಂದಿನಿಂದ ಪ್ರತಿ ವರ್ಷ ಈ ದಿನವನ್ನು ಆಚರಿಸಲಾಗುತ್ತದೆ.

### ವಿಶ್ವ ರಕ್ತದಾನಿಗಳ ದಿನ 2024: ಮಹತ್ವ

ರಕ್ತದಾನ ಮತ್ತು ಸಮುದಾಯಗಳನ್ನು ಬೆಂಬಲಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ವಿಶ್ವ ರಕ್ತದಾನಿಗಳ ದಿನವನ್ನು ಆಚರಿಸುತ್ತದೆ. ಆರೋಗ್ಯ ಉದ್ಯಮಕ್ಕೆ ಆರೋಗ್ಯಕರ ರಕ್ತದ ಪೂರೈಕೆಯನ್ನು ಇರಿಸಿಕೊಳ್ಳಲು ರಕ್ತದಾನ ಮಾಡಲು ಜನರನ್ನು ಇದು ಒತ್ತಾಯಿಸುತ್ತದೆ. ರಕ್ತದಾನಕ್ಕಾಗಿ ಮತ್ತು ವರ್ಷಗಳಲ್ಲಿ ಜೀವಗಳನ್ನು ಉಳಿಸಿದ್ದಕ್ಕಾಗಿ ಪ್ರಪಂಚದಾದ್ಯಂತದ ರಕ್ತದ ದಾನಿಗಳಿಗೆ ಧನ್ಯವಾದ ಸಲ್ಲಿಸಲು ಮತ್ತು ರೋಗಿಗಳು ಮತ್ತು ದಾನಿಗಳ ಮೇಲೆ ಆಳವಾದ ಪರಿಣಾಮಗಳನ್ನು ಗೌರವಿಸಲು ಇದು ಉತ್ತಮ ಅವಕಾಶವಾಗಿದೆ. ಮುಂದುವರಿದ ಸವಾಲುಗಳನ್ನು ಎದುರಿಸಲು ಮತ್ತು ಪ್ರಪಂಚದಾದ್ಯಂತ ಸುರಕ್ಷಿತ ರಕ್ತ ವರ್ಗಾವಣೆಯನ್ನು ಪ್ರವೇಶಿಸಬಹುದಾದ ಭವಿಷ್ಯದತ್ತ ಪ್ರಗತಿಯನ್ನು ವೇಗಗೊಳಿಸಲು ಇದು ಸಕಾಲಿಕ ಕ್ಷಣವಾಗಿದೆ.

### 2024 ರ ವಿಶ್ವ ರಕ್ತದಾನಿಗಳ ದಿನದ ಥೀಮ್ ಏನು?

2024 ರ ವಿಶ್ವ ರಕ್ತದಾನಿಗಳ ದಿನದ ಥೀಮ್: "20 ವರ್ಷಗಳ ದಾನವನ್ನು ಆಚರಿಸುವುದು: ರಕ್ತದಾನಿಗಳಿಗೆ ಧನ್ಯವಾದಗಳು!"

ಥೀಮ್ ಎರಡು ಪ್ರಮುಖ ಅಂಶಗಳನ್ನು ಎತ್ತಿ ತೋರಿಸುತ್ತದೆ. ಮೊದಲನೆಯದಾಗಿ, ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಲು ಆಯ್ಕೆ ಮಾಡುವವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಲು ಇದು ಒಂದು ಅವಕಾಶವಾಗಿದೆ. ರಕ್ತದಾನದ ಅವರ ನಿಸ್ವಾರ್ಥ ಕ್ರಿಯೆಯು ಅಸಂಖ್ಯಾತ ಜೀವಗಳನ್ನು ಉಳಿಸುತ್ತದೆ ಮತ್ತು ಸುರಕ್ಷಿತ ಮತ್ತು ಸುರಕ್ಷಿತ ರಕ್ತ ಪೂರೈಕೆಯ ಬೆನ್ನೆಲುಬಾಗಿ ಮುಂದುವರಿಯುತ್ತದೆ.

ಎರಡನೆಯದಾಗಿ, ಈ ವರ್ಷವು ರಕ್ತದಾನದ ಜಾಗೃತಿ ಮತ್ತು ಪ್ರಚಾರದ 20 ವರ್ಷಗಳನ್ನು ಗುರುತಿಸುತ್ತದೆ. ಸಾಧಿಸಿದ ಪ್ರಗತಿಯನ್ನು ಪ್ರತಿಬಿಂಬಿಸಲು, ಸವಾಲುಗಳನ್ನು ಅಂಗೀಕರಿಸಲು ಮತ್ತು ಕ್ಷೇತ್ರದಲ್ಲಿ ದಣಿವರಿಯಿಲ್ಲದೆ ದುಡಿಯುತ್ತಿರುವ ರಕ್ತದಾನಿಗಳು, ರಕ್ತ ಕೇಂದ್ರಗಳು ಮತ್ತು ಸಂಸ್ಥೆಗಳ ಸಮರ್ಪಣೆಯನ್ನು ಆಚರಿಸಲು ಇದು ಒಂದು ಅವಕಾಶವಾಗಿದೆ.



# ಜೊಲ್ಲೆ ಗ್ರುಪ್‌ನ ಅಂಗ ಸಂಸ್ಥೆಗಳ ವಾರ್ಷಿಕ ಸರ್ವ ಸಾಧಾರಣ ಸಭೆ

ಯಕ್ಸಂಬಾ ಪಟ್ಟಣದ ಬೀರೇಶ್ವರ ಸಭಾ ಭವನದಲ್ಲಿ ಸೋಮವಾರ ಆಯೋಜಿಸಲಾದ ಶ್ರೀ ಬೀರೇಶ್ವರ ಕೊ ಆಫ್ ಕ್ರೆಡಿಟ್ ಸೊಸೈಟಿ 34ನೇ ವಾರ್ಷಿಕ ಸರ್ವ ಸಾಧಾರಣಾ ಸಭೆ ಹಾಗೂ ಜೊಲ್ಲೆ ಗ್ರುಪ್‌ನ ಅಂಗ ಸಂಸ್ಥೆಗಳ ವಾರ್ಷಿಕ ಸರ್ವ ಸಾಧಾರಣಾ ಸಭೆಯಲ್ಲಿ ಜೊಲ್ಲೆ ಗ್ರುಪ್ ಸಂಸ್ಥಾಪಕರು ಹಾಗೂ ಮಾಜಿ ಸಂಸದರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆಯವರು ಮಾತನಾಡಿ "ರೈತರು ಕೃಷಿಯಲ್ಲಿ ನ್ಯಾನೋ ಟೆಕ್ನಾಲಾಜಿ ಅಳವಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು. ಹಳ್ಳಿಯಿಂದ ದಿಲ್ಲಿಯವರಿಗೆ ಜೊಲ್ಲೆ ಗ್ರುಪ್ ಬೆಳೆಸುವ ಗುರಿ ನಮ್ಮದಾಗಿದೆ. ಮುಂಬರುವ ದಿನಗಳಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ದೊಡ್ಡ ಮಟ್ಟದಲ್ಲಿ ಸ್ಥಾಪಿಸಿ ಗಡಿ ಭಾಗದ ಮಕ್ಕಳಿಗೆ ಶಿಕ್ಷಣ ಕೊಡುವ ಸಂಕಲ್ಪದ ಜೊತೆಗೆ ವೈದ್ಯಕೀಯ ಸೇವೆ ನೀಡುವ ಜೊಲ್ಲೆ ಗ್ರುಪ್ ಗುರಿ ಹೊಂದಿದೆ. ಶ್ರೀ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸೈಟಿಯು ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯದಲ್ಲಿ ಒಟ್ಟು 211 ಶಾಖೆಗಳು ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರೀಕೃತ ಬ್ಯಾಂಕುಗಳ ಹಾಗೆ ಬೀರೇಶ್ವರ ಸೊಸೈಟಿ ಹೆಮ್ಮರವಾಗಿ ಬೆಳವಣಿಕೆ ಕಾಣುತ್ತಿದೆ. ಜೊಲ್ಲೆ ಗ್ರುಪ್ ಅಂಗಸಂಸ್ಥೆಗಳಲ್ಲಿ ಸೇವೆ ಸಲ್ಲಿಸುವ ಸಿಬ್ಬಂದಿಗಳಿಗೆ ಸೇವಾ ಆಧಾರಾದ ಮೇಲೆ ಪಿಂಚಣಿ ಯೋಜನೆ ಜಾರಿ ಮಾಡಲಾಗಿದೆ. ನಮ್ಮ ಸಂಸ್ಥೆಯಲ್ಲಿ ಮಾಡಿದ ಪಿಂಚಣಿ ವ್ಯವಸ್ಥೆಯನ್ನು ನೋಡಿದ ರಾಜ್ಯದ ಅನೇಕ ಕಡೆಗಳಲ್ಲಿ ಪಿಂಚಣಿ ವ್ಯವಸ್ಥೆ ಜಾರಿಯಾಗುತ್ತಿದೆ. ಜನರ ವಿಶ್ವಾಸ, ಗುಣಮಟ್ಟದ ಸೇವೆ ಕಾಪಾಡಿಕೊಂಡು ಹೋದರೆ ಸಂಸ್ಥೆಗಳು ಪ್ರಗತಿ ಕಾಣುತ್ತದೆ" ಎಂದರು.

ಸಹಸಂಸ್ಥಾಪಕಿ ಹಾಗೂ ಮಾಜಿ ಸಚಿವರು, ನಿಪ್ಪಾಣಿಯ ಜನಪ್ರಿಯ ಶಾಸಕರಾದ ಸೌ ಶಶಿಕಲಾ ಜೊಲ್ಲೆ ಮಾತನಾಡಿ "ದೇಶಾದ್ಯಂತ ನಮ್ಮ ಸಂಸ್ಥೆ ಹೆಸರುವಾಸಿಯಾಗಿದೆ. ಇದಕ್ಕೆ ನಮ್ಮ ಸಂಸ್ಥೆಗಳ ಸಲಹಾ ಸಮಿತಿ ಮತ್ತು ಸಿಬ್ಬಂದಿಯರ ಪ್ರಾಮಾಣಿಕ ಸೇವೆಯೆ ಕಾರಣ. ಅವರೆಲ್ಲರಿಗೂ ನಾನು ಚಿರಋಣಿ. ಚುನಾವಣೆಯಲ್ಲಿ ನಾವು ಸೋತಿರಬಹುದು. ಆದರೆ, ಸಹಕಾರಿ ಮೂಲಕ ಸಾಮಾಜಿಕ ಸೇವೆ ನಿರಂತರವಾಗಿ ನಡೆಯುತ್ತಿದೆ" ಎಂದು ತಿಳಿಸಿದರು.

ಶ್ರೀ ಬೀರೇಶ್ವರ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ರವೀಂದ್ರ ಚೌಗಲಾ ವರದಿ ವಾಚನ ಮಾಡಿ, ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಲ್ಲಿ 211 ಶಾಖೆಗಳನ್ನು ಹೊಂದಿದ ಬ್ಯಾಂಕ್ 40.55 ಕೋಟಿ ರೂ. ಗೂ ಹೆಚ್ಚು ಲಾಭ ಗಳಿಸಿದೆ. 2887 ಕೋಟಿ ರೂ. ಗೂ ಹೆಚ್ಚು ಸಾಲ ವಿತರಿಸಲಾಗಿದೆ. 3820 ಕೋಟಿ ರೂ. ಗೂ ಹೆಚ್ಚು ಠೇವಣಿ ಹೊಂದಿದೆ. 3 ಲಕ್ಷ 78 ಸಾವಿರ ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದೆ ಎಂದರು.

## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ




ಇದೇ ಸಂದರ್ಭದಲ್ಲಿ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘದ 31ನೇ ವಾರ್ಷಿಕ ಸಭೆ, ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸಹಕಾರಿ ಸಂಘದ 30ನೇ ವಾರ್ಷಿಕ ಸಭೆ, ಜೊಲ್ಲೆ ಶಿಕ್ಷಣ ಸಂಸ್ಥೆಯ 29ನೇ ವಾರ್ಷಿಕ ಸಭೆ, ಯಕ್ಸಂಬಾ ಮಹಿಳಾ ಹಾಲು ಉತ್ಪಾದಕರ ಸಂಘದ 17ನೇ ವಾರ್ಷಿಕ ಸಭೆ, ಲೋಕ ಕಲ್ಯಾಣ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ 13ನೇ ವಾರ್ಷಿಕ ಸಭೆಯ ವಾರ್ಷಿಕ ವರದಿಯನ್ನು ಆಯಾ ಸಂಸ್ಥೆಯ ವ್ಯವಸ್ಥಾಪಕರು ಮಂಡಿಸಿದರು.

ಬೆಂಗಳೂರು ಕೆಎಫ್ ಉಪಾಧ್ಯಕ್ಷ ಮಹಾಂತೇಶ ಪಾಟೀಲ, ಶಿವಗೌಂಡ ಪಾಟೀಲ, ರಾಜಣ್ಣ, ಬಿ.ಟಿ.ಬೆನಕಟ್ಟಿ, ಬಸವರಾಜ ತೇಲಿ, ಸುರೇಶ ರೆಡ್ಡಿ, ಮಲಗೊಂಡ ಪಾಟೀಲ, ಆರತಿ ಪೋತದಾರ, ನೇಮಿನಾಥ ಪಟ್ಟಣಕುಡೆ, ಸದಾಶಿವ ಕೋಕನೆ, ಚಂದ್ರಕಾಂತ ಝೋತ, ಮಹೇಶ ಭಾತೆ, ಬಾಬುರಾವ ಮಾಳಿ, ರವಿ ಕುದುರೆ, ಚಂದ್ರಶೇಖರ ಪಾಟೀಲ, ಶಿವು ಹಾಲಪ್ಪನವರ, ಬೀರೇಶ್ವರ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷ ಜಯಾನಂದ ಜಾಧವ, ಉಪಾಧ್ಯಕ್ಷ ಸಿದ್ರಾಮ ಗಡದೆ, ನಿರ್ದೇಶಕ ಅಪ್ಪಾಸಾಹೇಬ ಜೊಲ್ಲೆ, ಪವನ ಪಾಟೀಲ, ಸಿದವೀರ ಖಜ್ಜನವರ, ಸುಭಾಷ ಕದಮ, ಅನ್ವರ ದಾಡಿವಾಲೆ, ಪ್ರಧಾನ ವ್ಯವಸ್ಥಾಪಕ ರವಿಂದ್ರ ಚೌಗಲಾ, ಉಪಪ್ರಧಾನ ವ್ಯವಸ್ಥಾಪಕ ಮಹಾದೇವ ಮಂಗಾವತೆ, ಸುರೇಶ ಮಾನೆ ಸೇರಿದಂತೆ ನಿರ್ದೇಶಕ ರು, ಸದಸ್ಯರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. ಜೊಲ್ಲೆ ಗ್ರುಪ್‌ನ ಉಪಾಧ್ಯಕ್ಷ ಬಸವಪ್ರಸಾದ ಜೊಲ್ಲೆ ಸ್ವಾಗತಿಸಿದರು. ರಮೇಶ ಪಾಟೀಲ ನಿರೂಪಿಸಿದರು.



**ಉದ್ಘಾಟಿಸುತ್ತಿರುವುದು**

ಬೆಂಗಳೂರಿನಲ್ಲಿ ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರ ಮಹಾಮಂಡಳ ನಿಯಮಿತ ಇದರ ಸಫಲ್ ಡೈಲಿ ಫ್ರೆಶ್ ವ್ಯಾಪಾರ ಮಳಿಗೆ (ಮಾಲ್)ನ್ನು ಚಿಕ್ಕೋಡಿ ಲೋಕಸಭೆ ಮಾಜಿ ಸಂಸದರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು ಉದ್ಘಾಟಿಸಿದರು.




**ಸತ್ಕಾರ**

ಹುಬ್ಬಳ್ಳಿ ನಗರದಲ್ಲಿ ಪ್ರೇರಣಾ ಕಲಾ ಬಳಗ (ರಿ) ಪ್ರಸ್ತುತ ಪಡಿಸುತ್ತಿರುವ ವಿದ್ಯಾರ್ಥಿಗಳ ರಂಗಪ್ರವೇಶ ಮತ್ತು ಕುಚಿಪುಡಿ ನೃತ್ಯಗಳ ಕಾರ್ಯಕ್ರಮವನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಉದ್ಘಾಟಿಸಿ, ಸತ್ಕಾರ ಸ್ವೀಕರಿಸುತ್ತಿರುವ ದೃಶ್ಯ.



**ಉದ್ಘಾಟನೆ**

ನಿಪ್ಪಾಣಿಯ ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇದರ ನೂತನವಾಗಿ ನಿರ್ಮಿಸಿದ 500 ಕಿಲೋ ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಉದ್ಘಾಟಿಸಿದರು.



**ಸನ್ಮಾನಿಸುತ್ತಿರವುದು**

ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಆಗಿ ನೇಮಕಗೊಂಡ ಶ್ರೀ ಅಥರ್ವ ಶಿವರುದ್ರಪ್ಪ ಶೆಟ್ಟಿ ಇವರ ಸತ್ಕಾರ ಸಮಾರಂಭ ಕಾರ್ಯಕ್ರಮದಲ್ಲಿ ಗುರುಶಾಂತೇಶ್ವರ ಹಿರೇಮಠದ ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ, ಮತ್ತು ವಿರಕ್ತ ಮಠದ ಮ.ನಿ. ಪ್ರ.ಶಿವಬಸವ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಜೊಲ್ಲೆ ದಂಪತಿ ಸನ್ಮಾನಿಸುತ್ತಿರುವ ದೃಶ್ಯ.



**ತರಬೇತಿ ಕಾರ್ಯಗಾರ**

ವಿಶೇಷ ಒಲಂಪಿಕ್ಸ್ ಭಾರತ ಕರ್ನಾಟಕ ವತಿಯಿಂದ ಯಕ್ಸಂಬಾ ಪಟ್ಟಣದ ಆಶಾಜ್ಯೋತಿ ವಿಶೇಷ ಮಕ್ಕಳ ಉಚಿತ ವಸತಿ ಶಾಲೆಯ ವಿಶೇಷ ಶಿಕ್ಷಕರ ತರಬೇತಿ ಕಾರ್ಯಗಾರ ಸಭೆಯನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ, ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಹಾಗೂ ಸೌ. ಪ್ರಿಯಾ ಜೊಲ್ಲೆ ಯವರು ನಡೆಸುತ್ತಿರುವ ದೃಶ್ಯ.



**ಜ್ಯೋತಿ ಮುಖ್ಯ ಕಛೇರಿ ಸ್ಥಳಾತಂರ**

ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಯಾದ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಲಿ., ಯಕ್ಸಂಬಾ ಇದರ ಮುಖ್ಯ ಕಛೇರಿ ಕಟ್ಟಡದ ಸ್ಥಳಾಂತರ ಹಾಗೂ ಪೂಜಾ ಸಮಾರಂಭವನ್ನು ನಿರ್ದೇಶಕ ಮಂಡಳಿ ಸದಸ್ಯರು ಹಾಗೂ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಯವರು ನೆರವೇರಿಸಿದ ದೃಶ್ಯ.




**ಸತ್ಕಾರ**

ಚಿಕ್ಕೋಡಿಯಲ್ಲಿ ಜರುಗಿದ ರೋಟರಿ ಕ್ಲಬ್ ಸಂಸ್ಥೆಯ ಸುವರ್ಣ ಮಹೋತ್ಸವ ಹಾಗೂ ಚಾರ್ಟರ್ ಡೇ ಕಾರ್ಯಕ್ರಮವನ್ನು ಚಿಕ್ಕೋಡಿಯ ಚರಮೂರ್ತಿ ಮಠದ ಪ. ಪೂಜ್ಯ. ಶ್ರೀ ಸಂಪಾದನಾ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಉದ್ಘಾಟಿಸಿ, ಸತ್ಕಾರ ಸ್ವೀಕರಿಸುತ್ತಿರುವ ದೃಶ್ಯ.



**ಸಿಬ್ಬಂದಿ ವಸತಿಗೃಹ**

ಯಕ್ಸಂಬಾ ಪಟ್ಟಣದಲ್ಲಿ ಜೊಲ್ಲೆ ಗ್ರೂಪ್‌ನ ಎಲ್ಲ ಅಂಗ ಸಂಸ್ಥೆಗಳ ಸಿಬ್ಬಂದಿಗಳಿಗೆ 23 ಕುಟುಂಬಗಳ ವಸತಿಗೃಹ ನಿರ್ಮಾಣವಾಗಿದ್ದು ನೂತನ ಸುಸಜ್ಜಿತ ವಸತಿಗೃಹಗಳ ಕಟ್ಟಡವನ್ನು ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ ಜ್ಯೋತಿಪ್ರಸಾದ ಜೊಲ್ಲೆ ಯವರು ಉದ್ಘಾಟಿಸಿ ಪೂಜೆ ಸಲ್ಲಿಸಿದರು.

**ಜೊಲ್ಲೆ ಉದ್ಯೋಗ ಸಮೂಹ** ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ– 591244 Ph : 9844469288 / 7760983792 E-mail : darpanjus6@gmail.com

ಪ್ರಧಾನ ಸಂಪಾದಕರು :– ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ